ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-01-1971.

# *ಅವ್ಯಕ್ತ ಸ್ಥಿತಿಯ ಮೂಲಕ ಸೇವೆ* (अव्यक्त स्थिति द्वारा सेवा)

ಇಂದು ಶಬ್ದದಿಂದ ದೂರ ಹೋಗುವ ದಿನವಾಗಿದೆ ಹಾಗಾದರೆ ಬಾಪ್ ದಾದಾ ಹೇಗೆ ಶಬ್ದದಲ್ಲಿ ಬರುವರು? ಶಬ್ದದಿಂದ ದೂರವಿರುವ ಅಭ್ಯಾಸ ಬಹಳ ಅವಶ್ಯಕವಾಗಿದೆ. ಶಬ್ದದಲ್ಲಿ ಬಂದು ಆತ್ಮರ ಸೇವೆ ಮಾಡುವುದಕ್ಕಿಂತಲೂ ಹೆಚ್ಚು ಶಬ್ದದಿಂದ ದೂರವಾದ ಸ್ಥಿತಿಯಲ್ಲಿದ್ದು ಸೇವೆ ಮಾಡುವುದರಿಂದ ಸೇವೆಯ ಪ್ರತ್ಯಕ್ಷ ಪ್ರಮಾಣ ನೋಡಬಹುದು. ತಮ್ಮೆಲ್ಲರಲ್ಲಿ ಅವ್ಯಕ್ತ ಸ್ಥಿತಿಯಿರುವುದರಿಂದ ಅನ್ಯ ಆತ್ಮರಿಗೂ ಒಂದು ಕ್ಷಣದಲ್ಲಿ ಅವ್ಯಕ್ತ ಸ್ಥಿತಿಯ ಅನುಭವ ಮಾಡಿಸಿದರೆ ಆ ಪ್ರತ್ಯಕ್ಷಫಲ-ಸ್ವರೂಪ ತಮ್ಮೆದುರಿಗೆ ಕಂಡು ಬರುವುದು. ಶಬ್ದದಿಂದ ದೂರವಾದ ಸ್ಥಿತಿಯಲ್ಲಿ ಸ್ಥಿತರಾಗಿ ಮತ್ತೆ ಶಬ್ದದಲ್ಲಿ ಬರುವುದರಿಂದ ಶಬ್ದವು ಶಬ್ದವೆನಿಸುವುದಿಲ್ಲ. ಆದರೆ ಆ ಶಬ್ದದಲ್ಲಿಯೂ ಅವ್ಯಕ್ತ ತರಂಗಗಳ ಪ್ರವಾಹ ಯಾರನ್ನಾದರೂ ತಂದೆಯ ಕಡೆಗೆ ಆಕರ್ಷಣೆ ಮಾಡುತ್ತದೆ. ಆ ಶಬ್ದವನ್ನು ಕೇಳುತ್ತಲೇ ಅವರಿಗೆ ತಮ್ಮ ಅವ್ಯಕ್ತ ಸ್ಥಿತಿಯ ಅನುಭವವಾಗುವುದು. ಈ ಸೃಷ್ಟಿಯಲ್ಲಿ ಹೇಗೆ ಚಿಕ್ಕ ಮಕ್ಕಳಿಗೆ ಜೋಗುಳ ಹಾಡುತ್ತಾರೆ. ಅದೂ ಶಬ್ದವಾಗಿದೆ ಆದರೆ ಆ ಶಬ್ದವು, ಶಬ್ದದಿಂದ ದೂರ ಕೊಂಡೊಯ್ಯುವಂತಹ ಸಾಧನವಾಗಿದೆ. ಅದೇ ರೀತಿ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಶಬ್ದದಲ್ಲಿ ಬನ್ನಿ, ಆಗ ಶಬ್ದದಿಂದ ದೂರವಾದ ಸ್ಥಿತಿಯ ಅನುಭವ ಮಾಡಿಸುವಿರಿ. ಒಂದು ಕ್ಷಣದ ಅವ್ಯಕ್ತ ಸ್ಥಿತಿಯ ಅನುಭವ ಆತ್ಮನನ್ನು ಪರಮಾತ್ಮನ ಅವಿನಾಶಿ ಸಂಬಂಧದಲ್ಲಿ ಜೋಡಿಸಬಲ್ಲದು. ಮಾಯೆ ಅಂತಹ ಅನುಭವಿ ಆತ್ಮನನ್ನು ಅಲುಗಾಡಿಸಲು ಸಾಧ್ಯವಾಗದಂತಹ ಖಂಡಿಸದ ಸಂಬಂಧದಲ್ಲಿ ಜೋಡಿಸುವುದು. ಕೇವಲ ಶಬ್ದದಿಂದ ಪ್ರಭಾವಿತರಾಗುವಂತಹ ಅನೇಕ ಆತ್ಮರು ಅನೇಕ ಶಬ್ದಗಳನ್ನು ಕೇಳುವುದರಿಂದ ಬಂದುಹೋಗುವುದರಲ್ಲಿ ಬರುತ್ತವೆ. ಆದರೆ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾದ ಶಬ್ದದಿಂದ ಅನುಭವಿ ಆತ್ಮರು ಬಂದುಹೋಗುವದರಿಂದ ಬಿಡುಗಡೆಯಾಗುತ್ತವೆ. ಇಂತಹ ಆತ್ಮರ ಮೇಲೆ ಯಾವುದೇ ರೂಪದ ಪ್ರಭಾವವಾಗುವುದಿಲ್ಲ.

ಸದಾ ತಮ್ಮನ್ನು ಕಂಬೈಂಡ್ ಎಂದು ತಿಳಿದು, ಕಂಬೈಂಡ್ ರೂಪದ ಸೇವೆಯನ್ನು ಮಾಡಿ ಎಂದರೆ ಅವ್ಯಕ್ತ ಸ್ಥಿತಿ ಮತ್ತೆ ಶಬ್ದದ ಕಂಬೈಂಡ್ ರೂಪದ ಸೇವೆ ವಾರಸುದಾರರನ್ನು ತಯಾರು ಮಾಡುವುದು. ಕೇವಲ ಶಬ್ದದಿಂದ ಸೇವೆ ಮಾಡಿದಾಗ ಪ್ರಜೆಗಳಾಗುತ್ತಾರೆ. ಹಾಗಾದರೆ ಈಗ ಸೇವೆಯಲ್ಲಿ ನವೀನತೆಯನ್ನು ತನ್ನಿ. ಈ ರೀತಿ ಸೇವೆ ಮಾಡುವ ಸಾಧನವಾವುದು? ಯಾವ ಸಮಯದಲ್ಲಿ ಸೇವೆ ಮಾಡುತ್ತೀರೋ ಆ ಸಮಯ ಮಂಥನ ನಡೆಯುತ್ತದೆ, ಆದರೆ ನೆನಪಿನಲ್ಲಿ ಮಗ್ನ- ಈ ಸ್ಥಿತಿ ಮಂಥನದ ಸ್ಥಿತಿಯಿಂದ ಕಡಿಮೆಯಿರುತ್ತದೆ. ಬೇರೆಯವರ ಕಡೆಗೆ ಹೆಚ್ಚು ಗಮನವಿರುತ್ತದೆ. ತಮ್ಮ ಅವ್ಯಕ್ತ ಸ್ಥಿತಿಯ ಕಡೆಗೆ ಕಡಿಮೆ ಗಮನವಿರುತ್ತದೆ. ಈ ಕಾರಣಜ್ಞಾನದ ವಿಸ್ತಾರದ ಪ್ರಭಾವ ಬೀಳುತ್ತದೆ. ಆದರೆ ನೆನಪಿನಲ್ಲಿ ಮಗ್ನರಾಗಿರುವ ಪ್ರಭಾವ ಕಡಿಮೆ ಕಂಡುಬರುತ್ತದೆ. ಜ್ಞಾನ ಬಹಳ ಶ್ರೇಷ್ಠವಾಗಿದೆ ಎಂದು ಫಲಿತಾಂಶದಲ್ಲಿ ಎನ್ನುತ್ತಾರೆ ಆದರೆ ಮಗ್ನರಾಗಿರುವ ಸಾಹಸವಿರುವುದಿಲ್ಲ ಏಕೆಂದರೆ ಅವ್ಯಕ್ತ ಸ್ಥಿತಿಯಿಂದ ನೆನಪು ಎಂದರೆ ಸಂಬಂಧವನ್ನು ಜೋಡಿಸುವ ಅನುಭವ ಮಾಡಲಿಲ್ಲ. ಇನ್ನುಳಿದ ಸ್ವಲ್ಪ ಕಣಗಳನ್ನು ಪಡೆಯುವುದರಿಂದ ಪ್ರಜೆಗಳಾಗುತ್ತಾರೆ. ಈಗಿನ ಸಂಬಂಧ ಜೋಡಿಸುವುದರಿಂದ ಭವಿಷ್ಯ ಸಂಬಂಧದಲ್ಲಿ ಬರುವರು, ಇಲ್ಲವಾದರೆ ಪ್ರಜೆಗಳಲ್ಲಿ. ಒಂದು ಕ್ಷಣದಲ್ಲಿ ಅವ್ಯಕ್ತ ಅನುಭವದಿಂದ ಸಂಬಂಧ ಜೋಡಿಸುವಂತಹ ಹೊಸತನವನ್ನು ತರಬೇಕು. ಸಂಬಂಧ ಮತ್ತು ಸಂಪರ್ಕ ಈ ಎರಡರಲ್ಲಿ ಅಂತರವಿದೆ. ಸಂಪರ್ಕದಲ್ಲಿ ಬರುತ್ತಾರೆ. ಸಂಬಂಧದಲ್ಲಿ ಬರುವುದಿಲ್ಲ. ತಿಳಿಯಿತೇ?

ಈ ದಿನ ಅವ್ಯಕ್ತ ಸ್ಥಿತಿಯ ಅನುಭವ ಮಾಡಿದಿರಿ. ಈ ಅನುಭವವನ್ನು ಸದಾಕಾಲ ಕಾಯಂ ಇಟ್ಟುಕೊಳ್ಳಿ ಆಗ ಬೇರೆಯವರಿಗೆ ಅನುಭವ ಮಾಡಿಸಬಲ್ಲಿರಿ. ಇತ್ತೀಚೆಗೆ ವಾಣಿ ಅಥವಾ  ಅನ್ಯ ಸಾಧನಗಳು ಅನೇಕ ಪ್ರಕಾರದಿಂದ, ಅನೇಕರ ಮುಖಾಂತರ ಆತ್ಮರನ್ನು ಪ್ರಭಾವಿತ ಮಾಡುತ್ತಿದ್ದೀರಿ. ಆದರೆ ತಮ್ಮನ್ನು ಬಿಟ್ಟು ಬೇರೆ ಯಾರೂ ಅನುಭವ ಮಾಡಲಾರರು ಮತ್ತು ಮಾಡಿಸಲಾರರು. ಆದ್ದರಿಂದ ಈ ಸಮಯದಲ್ಲಿ ಇಂತಹ ಅನುಭವ ಮಾಡಿಸುವ ಆವಶ್ಯಕತೆಯಿದೆ. ಎಲ್ಲರ ಅಭಿಲಾಷೆಯೂ ಆಗಿದೆ,

ಕೇಳುವ ಇಚ್ಛುಕರಲ್ಲ, ಸ್ವಲ್ಪ ಸಮಯದಲ್ಲಿ ಅನುಭವ ಮಾಡುವ ಇಚ್ಛುಕರಾಗಿದ್ದಾರೆ. ಅನುಭವದಲ್ಲಿದ್ದು ಅನುಭವ ಮಾಡಿಸಿ. ಎಲ್ಲರ ಸ್ನೇಹ ವತನದಲ್ಲಿ ಸಿಕ್ಕಿತು. ಮೂರು ಪ್ರಕಾರದ ನೆನಪು ಮತ್ತು ಸ್ನೇಹ ವತನದಲ್ಲಿ ತಲುಪಿತು ಎಂದು ಹೇಳಿದ್ದೆವು. ವಿಯೋಗಿ, ಯೋಗಿ ಮತ್ತು ಸ್ನೇಹಿ, ಮೂರೂ ರೂಪದ ನೆನಪು - ಪ್ರೀತಿ ಬಾಪ್ ದಾದಾರಿಗೆ ಸಿಕ್ಕಿತು. ಪುನರಾವರ್ತನೆಯ (Raisvision course) ಕೋರ್ಸ್ ನ ವರ್ಷವೂ ಸಮಾಪ್ತಿಯಾಗುತ್ತಿದೆ. ವರ್ಷ ಸಮಾಪ್ತಿಯಾಗುವಾಗ ವಿದ್ಯಾರ್ಥಿಗೆ ತಮ್ಮ ಫಲಿತಾಂಶವನ್ನು ತೆಗೆಯಬೇಕಾಗುತ್ತದೆ. ಹಾಗಾದರೆ ಈ ವರ್ಷ ಫಲಿತಾಂಶದಲ್ಲಿ ಪ್ರತಿಯೊಬ್ಬರೂ ತಮ್ಮ ಯಾವ ಫಲಿತಾಂಶವನ್ನು ತೆಗೆಯುವಿರಿ? ಇದಕ್ಕಾಗಿ ನಾಲ್ಕು ಮುಖ್ಯ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ತಮ್ಮಲ್ಲಿ ಎಲ್ಲಾ ಪ್ರಕಾರದ ಶ್ರೇಷ್ಠತೆ ಎಷ್ಟಿದೆ?

2. ಸಂಪೂರ್ಣತೆಯಲ್ಲಿ ಅಥವಾ ಸರ್ವರ ಸಂಬಂಧದಲ್ಲಿ ಸಮೀಪತೆ ಎಷ್ಟಿದೆ?

3. ತಮ್ಮಲ್ಲಿ ಅಥವಾ ಬೇರೆಯವರಲ್ಲಿ ಸಂಬಂದಲ್ಲಿ ಸಂತುಷ್ಟತೆ ಎಷ್ಟಿದೆ?

4. ತಮ್ಮಲ್ಲಿ ಶೂರವೀರತೆ ಎಷ್ಟು ಬಂದಿದೆ? ಈ ನಾಲ್ಕು ಮಾತುಗಳನ್ನು ತಮ್ಮಲ್ಲಿ ಪರಿಶೀಲನೆ ಮಾಡಬೇಕು. ಇಂದಿನ ದಿನ ತಮ್ಮ ಫಲಿತಾಂಶವನ್ನು ಪರಿಶೀಲನೆ ಮಾಡುವ ಕರ್ತವ್ಯವನ್ನು ಮೊದಲುಮಾಡಬೇಕು. ಇಂದು ಕೇವಲ ಸ್ಮೃತಿದಿನವೆಂದು ಆಚರಣೆ ಮಾಡುವುದಲ್ಲ ಆದರೆ ಇಂದಿನ ದಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ದಿನವೆಂದು ಆಚರಣೆ ಮಾಡಬೇಕು. ಇಂದಿನ ದಿನ ಸ್ಥಿತಿಯ ಸ್ತರವನ್ನು ಬದಲಿಸುವ ದಿನವೆಂದು ತಿಳಿಯಿರಿ. ಇತ್ತೀಚೆಗೆ ಪಾರದರ್ಶಕ ವಸ್ತುಗಳು ಪ್ರಿಯವಾಗಿರುವಂತೆ ತಮ್ಮ ಸ್ಥಿತಿಯನ್ನು ಪಾರದರ್ಶಕತೆಗೆ ಬದಲಾಯಿಸಿ ಇಂದಿನ ದಿನದ ಮಹತ್ವ ತಿಳಿಯಿತೇ? ತಮ್ಮ ಶರೀರದಲ್ಲಿ ವಿರಾಜಮಾನವಾಗಿರುವ ಆತ್ಮ ಸ್ಪಷ್ಟವಾಗಿ ಕಂಡುಬರುವಷ್ಟು ಪಾರದರ್ಶಕವಾಗಿ ತಮ್ಮ ಆತ್ಮಿಕ ಸ್ವರೂಪ ಅವರಿಗೆ ತಮ್ಮ ಆತ್ಮಿಕ ಸ್ವರೂಪದ ಸಾಕ್ಷಾತ್ಕಾರ ಮಾಡಿಸಲಿ. ಇದನ್ನೇ ಅವ್ಯಕ್ತ ಅಥವಾ ಆತ್ಮಿಕ ಸ್ಥಿತಿಯ ಅನುಭವ ಮಾಡಿಸುವುದು ಎಂದು ಹೇಳುತ್ತಾರೆ.

ಇಂದು ನೆನಪಿನ ಯಾತ್ರೆಯ ಫಲಿತಾಂಶವೇನಿತ್ತು? ಸ್ನೇಹ ಸ್ವರೂಪವಿತ್ತೋ ಅಥವಾ ಶಕ್ತಿ ಸ್ವರೂಪವಿತ್ತೋ? ಈ ಸ್ನೇಹವೂ ಶಕ್ತಿಯ ವರದಾನದ ಪ್ರಾಪ್ತಿ ಮಾಡಿಸುತ್ತದೆ. ಆದ್ದರಿಂದ ಇಂದು ಸ್ನೇಹದ ವರದಾನ ಪ್ರಾಪ್ತಿ ಮಾಡಿಕೊಳ್ಳುವ ದಿನವಾಗಿದೆ. ಪುರುಷಾರ್ಥದಿಂದ ಪ್ರಾಪ್ತಿ ಮಾಡಿಕೊಳ್ಳುವುದು ಒಂದಾಗಿದೆ ಮತ್ತೊಂದು ವರದಾನದಿಂದ ಪ್ರಾಪ್ತಿಮಾಡಿಕೊಳ್ಳುವುದು. ಇಂದಿನ ದಿನ ಪುರುಷಾರ್ಥದಿಂದ ಶಕ್ತಿ ಪ್ರಾಪ್ತಿ ಮಾಡಿಕೊಳ್ಳುವುದಲ್ಲ ಆದರೆ ಸ್ನೇಹದಿಂದ ಶಕ್ತಿಯ ವರದಾನ ಪ್ರಾಪ್ತಿ ಮಾಡಿಕೊಳ್ಳುವ ದಿನವಾಗಿದೆ. ಇಂದಿನ ದಿನವನ್ನು ವಿಶೇಷ ವರದಾನದ ದಿನವೆಂದು ತಿಳಿಯಿರಿ. ಸ್ನೇಹದಿಂದ ಯಾರಾದರೂ ವರದಾತನಿಂದ ವರದಾನವನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ತಿಳಿಯಿತೇ? ಪುರುಷಾರ್ಥದಿಂದಲ್ಲ, ಸ್ನೇಹದಿಂದ ಯಾರು ಎಷ್ಟು ವರದಾನ ಪಡೆಯುತ್ತಾರೋ ಅದು ಅವರಿಗೆ ಬಿಟ್ಟದ್ದು. ಆದರೆ ಸ್ನೇಹದಿಂದ ಎಲ್ಲರೂ ಸಮೀಪ ಬಂದು ವರದಾನ ಪಡೆಯಬಹುದು. ವರದಾನದ ದಿನವನ್ನು ಎಷ್ಟು ತಿಳಿಯುವರೋ ಅಷ್ಟು ಪಡೆಯುವರು. ಗ್ರಹಿಸುವವರ ಕಮಾಲ್ ಆಗಿದೆ. ಇಂದಿನ ವರದಾನದ ದಿನದಂದು ಯಾರು ಎಷ್ಟು ಗ್ರಹಿಸುವರೋ ಅಷ್ಟು ವರದಾನಗಳನ್ನು ಪ್ರಾಪ್ತಿ ಮಾಡಿಕೊಂಡರು. ಒಬ್ಬ ತಂದೆಯನ್ನು ಬಿಟ್ಟು ಯಾರ ಆಕರ್ಷಣೆಯಾಗದಂತೆ ಹೇಗೆ ಪುರುಷಾರ್ಥ ಮಾಡುವಿರೋ ಹಾಗೆಯೇ ಇಂದಿನ ದಿನ ಸಹಜ ನೆನಪಿನ ಅನುಭವ ಮಾಡಿದಿರಿ. ಒಳ್ಳೆಯದು.

ಅವ್ಯಕ್ತ ಮುರಳಿ 18-01-1971.

***ಅವ್ಯಕ್ತ ಸ್ಥಿತಿಯ ಮೂಲಕ ಸೇವೆ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು  ಶಬ್ದಕ್ಕೆ ಅತೀತವಾದ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತವಾಗಿ ಇತರರಿಗೂ ಅವ್ಯಕ್ತ ಸ್ಥಿತಿಯನ್ನು ಅನುಭವ ಮಾಡಿಸಿದ್ದೇನೆ.

2. ನಾನು ಶಬ್ದಕ್ಕೆ ಅತೀತ ಸ್ಥಿತಿಯಲ್ಲಿದ್ದು, ಶಬ್ದದಲ್ಲಿದ್ದರೂ ಅವ್ಯಕ್ತ ತರಂಗಗಳಿಂದ ಎಲ್ಲರನ್ನೂ ತಂದೆಯ ಕಡೆಗೆ ಆಕರ್ಷಿತವಾಗುವಂತೆ ಮಾಡಿದ್ದೇನೆ.

3. ನಾನು ಅವ್ಯಕ್ತ ಸ್ಥಿತಿಯ ಅನುಭವದಿಂದ ತಂದೆಯೊಂದಿಗೆ ಅವಿನಾಶಿ ಸಂಬಂಧದಲ್ಲಿರುವ ಮಾಯಾಜೀತ್ ಸ್ವರೂಪ.

4. ನಾನು ಕಂಬೈಂಡ್ (ಅವ್ಯಕ್ತ ಸ್ಥಿತಿ ಮತ್ತು ಶಬ್ದ) ಸ್ವರೂಪದಲ್ಲಿ ಸೇವೆಯನ್ನು ಮಾಡಿ ವಾರಸುದಾರರನ್ನು ತಯಾರು ಮಾಡಿದ್ದೇನೆ.

5. ನಾನು ಅವ್ಯಕ್ತ ಸ್ಥಿತಿಯ ಅನುಭವದಿಂದ ಎಲ್ಲರ ಸಂಬಂಧವನ್ನು ಶಿವಪರಮಾತ್ಮನೊಂದಿಗೆ ಜೋಡಿಸಿ ಭವಿಷ್ಯದಲ್ಲಿ ಬ್ರಹ್ಮಾ ತಂದೆಯ ಸಂಬಂಧದಲ್ಲಿ ಬರುವ ಹಾಗೆ ತಯಾರು ಮಾಡಿದ್ದೇನೆ.

6. ನಾನು ನನ್ನಲ್ಲಿ

- ಸರ್ವ ಪ್ರಕಾರದ ಶ್ರೇಷ್ಠತೆಯ ಪ್ರಮಾಣ
- ಸಂಪೂರ್ಣತೆಯಲ್ಲಿ ಮತ್ತು ಸರ್ವರ ಸಂಬಂಧದಲ್ಲಿ ಸಮೀಪತೆಯ ಪ್ರಮಾಣ
- ನನ್ನಲ್ಲಿ ಮತ್ತು ಬೇರೆಯವರಲ್ಲಿ ಸಂಬಂಧದಲ್ಲಿ ಸಂತುಷ್ಟತೆಯ ಪ್ರಮಾಣ
- ನನ್ನಲ್ಲಿ ಶೂರವೀರತೆಯ ಪ್ರಮಾಣವನ್ನು ಪರಿಶೀಲಿಸಿ ಕರ್ತವ್ಯವನ್ನು ನಿಭಾಯಿಸುತ್ತಿದ್ದೇನೆ.

7. ನಾನು ನನ್ನ ಆತ್ಮಿಕ ಸ್ವರೂಪದಿಂದ ಎಲ್ಲರ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಸಿರುವ ಸಾಕ್ಷಾತ್ಕಾರ ಮೂರ್ತಿ.

8. ನಾನು ಸ್ನೇಹದಿಂದಲೇ ಪರಮಾತ್ಮನಿಂದ ಎಲ್ಲಾ ವರದಾನಗಳನ್ನು ಪಡೆದಿದ್ದೇನೆ.

9. ನನಗೆ ಒಬ್ಬ ತಂದೆಯ ಹೊರತು ಅನ್ಯ ಯಾರೂ ಇಲ್ಲ (ಆಲೋಚನಾ ಸ್ಥಾಯಿಯಲ್ಲಿ).